# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

**ಕೇಂದ್ರ ಕಛೇರಿ : ಕಲಬುರಗಿ**

ಸಂಖ್ಯೆ:ಕಕಸಾ/ಕೇಕ/ಸಿಬ್ಬಂದಿ/ಸಿ4/ವರ್ಗ/ಕ57/330/2022-23 ದಿನಾಂಕ: 12.08.2022

## -:: ಪರಿಷ್ಕೃತ ಅಧಿಸೂಚನೆ ::-

ವಿಷಯ: **2022-23 ನೇ ಸಾಲಿನ ಆನ್-ಲೈನ್ ವರ್ಗಾವಣೆ ಕುರಿತು.**

ಉಲ್ಲೇಖ: 1) ಸುತ್ತೋಲೆ ಸಂಖ್ಯೆ 80/2021 ದಿನಾಂಕ 20.07.2021.

2) ಕಕಸಾ/ಕೇಕ/ಸಿಬ್ಬಂದಿ/ಸಿ3/ವರ್ಗ/ಕ44/582/2022-23 ದಿ:18.08.2021.

3) ಕಕಸಾ/ಕೇಕ/ಸಿಬ್ಬಂದಿ/ಸಿ4/ವರ್ಗ/ಕ57/659/2022-23 ದಿ:09.07.2022.

4) ಸೂಕ್ತಾಧಿಕಾರಿಗಳ ಆದೇಶ ದಿನಾಂಕ:12.08.2022

**-**-**

ಕಕರಸಾ ನಿಗಮದ ವ್ಯಾಪ್ತಿಯೊಳಗೆ ದರ್ಜೆ-3 ಮೇಲ್ವಿಚಾರಕೇತರ ಮತ್ತು ದರ್ಜೆ-4 ರ ಸಿಬ್ಬಂದಿಗಳ ವರ್ಗಾವಣೆ ಕುರಿತು ಉಲ್ಲೇಖ (1) & (2) ರ ಸುತ್ತೋಲೆ ಹಾಗೂ ತಿದ್ದುಪಡಿ ಆದೇಶದಲ್ಲಿನ ಮಾನದಂಡಗಳನುಸಾರ ಅರ್ಹ ಸಿಬ್ಬಂದಿಗಳಿಂದ 2022 ನೇ ಸಾಲಿನ ಆನ್‌ಲೈನ್ ಮೂಲಕ ಅರ್ಜಿಗಳನ್ನು ಉಲ್ಲೇಖ (3) ರ ಅಧಿಸೂಚನೆಯನ್ವಯ ಆಹ್ವಾನಿಸಲಾಗಿತ್ತು. ಸದರಿ ಅಧಿಸೂಚನೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ವರ್ಗಾವಣೆ ಪ್ರಕ್ರಿಯೆಯ ಘಟನಾನುಕ್ರಮದಲ್ಲಿ **(Calendar of Events)** ಈ ಕೆಳಗಿನಂತೆ ಸೂಕ್ತಾಧಿಕಾರಿಗಳ ಆದೇಶದಂತೆ ಪರಿಷ್ಕರಿಸಲಾಗಿದೆ. ಹಾಗೂ ಉಲ್ಲೇಖಿತ ಪತ್ರಗಳಲ್ಲಿನ ಎಲ್ಲಾ ನಿರ್ದೇಶನಗಳನ್ನು ಮುಂದುವರೆಯುತ್ತದೆ.

| ಕ್ರ. ಸಂ | ವರ್ಗಾವಣಾ ಚಟುವಟಿಕೆಗಳು (ವಿಭಾಗದ ಒಳಗೆ ಹಾಗೂ ಅಂತರ ವಿಭಾಗ) | ದಿನಾಂಕ | |
|---|---|---|---|
| | | ರಿಂದ | ವರೆಗೆ |
| 1 | ಗಣಕ ಇಲಾಖೆಯಿಂದ ವರ್ಗಾವಣೆಗೆ ಅರ್ಹರಿರುವ ಸಿಬ್ಬಂದಿಗಳ ಯೂನಿಟ್‌ವಾರು ಅರ್ಹತಾ ಪಟ್ಟಿಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು. | 08-08-2022 | 12-08-2022 |
| 2 | ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಅರ್ಹತಾ ಪಟ್ಟಿಗೆ ಅರ್ಜಿದಾರರು ಆಕ್ಷೇಪಣೆಗಳನ್ನು (ಇದ್ದಲ್ಲಿ) ಆಯಾ ಯೂನಿಟ್ ಮುಖ್ಯಸ್ಥರಿಗೆ ಸಲ್ಲಿಸಲು. | 13-08-2022 | 16-08-2022 |
| 3 | ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸರಿಪಡಿಸಿದ ನಂತರ, ಅಂತರ ವಿಭಾಗ ವರ್ಗಾವಣಾ ಅರ್ಜಿಗಳೊಂದಿಗೆ ದೃಢೀಕೃತ ಪಟ್ಟಿಯನ್ನು ಆಯಾ ಇಲಾಖಾ ಮುಖ್ಯಸ್ಥರಿಗೆ ಹಾಗೂ ವಿಭಾಗದೊಳಗಿನ ವರ್ಗಾವಣಾ ಅರ್ಜಿಗಳೊಂದಿಗೆ ದೃಢೀಕೃತ ಪಟ್ಟಿಯನ್ನು ವಿಭಾಗದ ವರ್ಗಾವಣಾ ಸಮಿತಿಗೆ ಸಿಬ್ಬಂದಿ ಶಾಖೆಯಿಂದ ಸಲ್ಲಿಸಲು. | 17-08-2022 | 22-08-2022 |
| 4 | ಆಯಾ ವರ್ಗಾವಣಾ ಸಮಿತಿಗಳು ವರ್ಗಾವಣಾ ಆದೇಶಗಳನ್ನು ಹೊರಡಿಸಿ, ಕಡ್ಡಾಯವಾಗಿ ಅನುಸರಣಾ ವರದಿಯನ್ನು ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕೇಂದ್ರ ಕಛೇರಿ ಕಲಬುರಗಿ ರವರಿಗೆ ಸಲ್ಲಿಸಲು. | 23-08-2022 | 30-08-2022 |
| 5 | ವರ್ಗಾವಣೆಗೊಂಡ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಲು. | 01-09-2022 | 15-09-2022 |

12/8/22

**ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು**

**ಪ್ರತಿಯನ್ನು :**

- ✓ ಮುಖ್ಯ ಗಣಕ ವ್ಯವಸ್ಥಾಪಕರು, ಕಕರಸಾ ನಿಗಮ ರವರ ಮಾಹಿತಿಗಾಗಿ ಹಾಗೂ **ಮೇಲ್ಕಂಡ ಘಟನಾನುಕ್ರಮದಂತೆ ಆನ್‌ಲೈನ್ ಮೂಲಕ ವರ್ಗಾವಣೆ ಪ್ರಕ್ರಿಯೆ ಜರುಗಿಸುವುದಕ್ಕೆ ಪೂರಕವಾಗಿ ತಂತ್ರಾಂಶಕ್ಕೆ ಸಂಬಂಧಪಟ್ಟ** ಎಲ್ಲಾ ಅಗತ್ಯ **ಕ್ರಮಗಳನ್ನು ಕೈಗೊಳ್ಳಲು ಹಾಗೂ ಸದರಿ ಪರಿಷ್ಕೃತ ಅಧಿಸೂಚನೆಯನ್ನು ಸಿಬ್ಬಂದಿಗಳ ಗಮನಕ್ಕಾಗಿ ವೆಬ್‌ಸೈಟ್‌ನಲ್ಲಿ ಈ ದಿನವೇ ಪ್ರಕಟಿಸಲು ಸೂಚಿಸಿದೆ.**
- ✓ ಎಲ್ಲಾ ಇಲಾಖಾ ಮುಖ್ಯಸ್ಥರು, ಕಕರಸಾ ನಿಗಮ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
- ✓ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ ಪ್ರಾಂಶುಪಾಲರು/ ಕಾರ್ಯ ವ್ಯವಸ್ಥಾಪಕರು/ ಕಾರ್ಯ ನಿರ್ವಾಹಕ ಅಭಿಯಂತರರು, ಕಕರಸಾ ನಿಗಮ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
- ✓ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಆಪ್ತ ಕಾರ್ಯದರ್ಶಿಗಳು, ಕಕರಸಾ ನಿಗಮ ರವರ ಮಾಹಿತಿಗಾಗಿ